**KAMS510033662021**

## 1 ನೇ ಹೆಚ್ಚುವರಿ ದಿವಾನಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು.

**ಉಪಸ್ಥಿತರುಃ ಶ್ರೀಮತಿ. ಸರಿತ ಕುಮಾರಿ.ಎ.ಎಂ**

ಬಿ.ಎ., ಎಲ್.ಎಲ್ ಬಿ.,

1 ನೇ ಹೆಚ್ಚುವರಿ ದಿವಾನಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ನಂಜನಗೂಡು.

**ದಿನಾಂಕಃ 23 ನೇ ಜುಲೈ, 2025**

**ಒಎಸ್ ಸಂಖ್ಯೆಃ (ORIGINAL SUIT NO)** 259/2021

**ವಾದಿಗಳುಃ** ಎಂ ಎನ್ ನಾಗರಾಜು ಮತ್ತು ಇತರರು

**(ವಾದಿಯ ಪರವಾಗಿ ಶ್ರೀ.ಎ ಪಿ ಎಂ.ಬಿ ., ವಕೀಲರು )**

**// ವಿರುದ್ಧ //**

**ಪ್ರತಿವಾದಿಗಳುಃ** ರಾಚಯ್ಯ ಬಿನ್ ಲೇಟ್ ರಾಚಯ್ಯ ,
ವಯಸ್ಸು ಸುಮಾರು 45 ವರ್ಷ,

**( ಪ್ರತಿವಾದಿಗಳ ಪರ ಶ್ರೀ.ಸಿ ಎಲ್ ಬಿ., ವಕೀಲರು )**

## ಮಧ್ಯಂತರ ಅರ್ಜಿ ಸಂಃ1

**ಅರ್ಜಿದಾರರು/ವಾದಿಗಳುಃ** ಎಂ ಎನ್ ನಾಗರಾಜು

**–ವಿರುದ್ಧ –**

**ಎದುರುದಾರರು/ಪ್ರತಿವಾದಿಗಳುಃ** ಜಯಮ್ಮ ಮತ್ತು ಇನ್ನೊಬ್ಬರು

**<u>ಸಿಪಿಸಿ ಕ್ರಮಾದೇಶ–39 ನಿಯಮ –1 ಮತ್ತು 2 ರನ್ವಯ ರ ಮಧ್ಯಂತರ ಅಶಜಿ ಸಂಃ1 ರ ವೇಲೆ ಆದೇಶ</u>**

ವಾದಿ ಈ ಅರ್ಜಿಯನ್ನು ಸಲ್ಲಿಸಿ ಪ್ರತಿವಾದಿಗಳಾಗಲೀ ಅವರ ವಾರಸುದಾರರಾಗಲೀ, ಹಕ್ಕುಳ್ಳವರು ಅಧಿಕಾರ ಪತ್ರ ಉಳ್ಳವರು ನಿಯೋಗಿಗಳು ಹಾಗೂ ಇನ್ನು ಮುಂತಾದವರು ಯಾರೇ ಆದರೂ ಈ ದಾವೆಯು ಸಂಪೂರ್ಣವಾಗಿ ಇತ್ಯರ್ಥವಾಗುವವರೆಗೆ ಅನೂಸೂಚಿತ ಸ್ವತ್ತಿನ ಒಳಗೆ ಪ್ರವೇಶ ಮಾಡದಂತೆ ಏಕಪಕ್ಷೀಯ ಮಧ್ಯಂತರ ಆದೇಶ ಹೊರಡಿಸಬೇಕಾಗಿ ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

**ಷೆಡ್ಯೂಲ್ ಸ್ವತ್ತಿನ ವಿವರ**

**ನಂಜನಗೂಡು ತಾಲ್ಲೂಕು, ಹುಲ್ಲಹಳ್ಳಿ ಹೋಬಳಿ, ರಾಯಗೌಡನಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ.1 ರಲ್ಲಿ ಇರುವ 4 ಎಕರೆ ಜಮೀನು**

**ಪೂರ್ವಕ್ಕೆ : ಚಂದ್ರಯ್ಯ ಬಿನ್ ಲೇಟ್ ಜವರಯ್ಯ ರವರ ಜಮೀನು**
**ಪಶ್ಚಿಮಕ್ಕೆ : ಕೆ.ಕೆಣ್ಣಗಣ್ಣಸ್ವಾಮಿ ಬಿನ್ ಕೆಂಪಣ್ಣ ರವರ ಜಮೀನು**
**ಉತ್ತರಕ್ಕೆ : ಸರ್ಕಾರಿ ಓಣಿ**
**ದಕ್ಷಿಣಕ್ಕೆ : ಶಿವಪ್ಪ ಬಿನ್ ಲೇಟ್ ರಾಜಪ್ಪ ರವರ ಜಮೀನು**

2. 1ನೇ ವಾದಿಯು ಹೇಳುವುದೇನೆಂದರೆ, ದಾವ ಅನುಸೂಚಿ ಸ್ವತ್ತುವು ವಾದಿಗಳ ಹಕ್ಕು ಮತ್ತು ಮಾಲೀಕತ್ವಕ್ಕೆ ಒಳಪಟ್ಟು ಸ್ವಾಧೀನಾನುಭವದಲ್ಲಿರುವ ಸ್ವತ್ತಾಗಿರುತ್ತದೆ. ಈ ಸ್ವತ್ತು ಮೂಲತಃ ವಾದಿಗಳ ತಂದೆ ನಂಜುಂಡಪ್ಪ ಬಿನ್ ಲೇಟ್ ಮರಿಸ್ವಾಮಪ್ಪ ಉ|| ಮರಿಸ್ವಾಮಿ ರವರ ಹೆಸರಿನಲ್ಲಿದ್ದು, ಈ ಸ್ವತ್ತನ್ನು ನಂಜನಗೂಡಿನ ತಹಶೀಲ್ದಾರ್ ರವರು ಸರ್ಕಾರಿ ಸಾಗುವಳಿ ಮಂಜುರಾತಿ ಮೂಲಕ ದಿ: 25/02/1963 ರಲ್ಲಿ ವಾದಿಗಳ ತಂದೆಯಾದ ಲೇಟ್ ನಂಜುಂಡಪ್ಪ ರವರಿಗೆ ನೀಡಿರುತ್ತಾರೆ. ಈ ದಾವಾ ಸ್ವತ್ತು ನಂಜನಗೂಡು ತಾಲ್ಲೂಕು, ಹುಲ್ಲಹಳ್ಳಿ ಹೋಬಳಿ, ರಾಯಗೌಡನಹಳ್ಳಿ ಗ್ರಾಮದಲ್ಲಿದ್ದು, ಸರ್ವೆ ನಂ; 1/19 ರಲ್ಲಿ 4 ಎಕರೆ ಜಮೀನು ನೀಡಿದ್ದು ಅಂದಿನಿಂದಲೂ ವಾದಿಗಳ ತಂದೆಯು ಸ್ವಾಧೀನವನ್ನು ಹೊಂದಿರುತ್ತಾರೆ. ನಂತರದಲ್ಲಿ ನಂಜುಂಡಪ್ಪ ರವರು ದಿಃ04.04.2012 ರಂದು ಮರಣ ಹೊಂದಿರುತ್ತಾರೆ. ಮರಣ ಹೊಂದಿದ ನಂತರ ವಾದಿಗಳು ಪೌತಿ ಸಬೂಬು ಖಾತೆ ಬದಲಾವಣೆ ಮಾಡಿಸಿಕೊಂಡು ಜಂಟಿಸ್ವಾಧೀನವನ್ನು ಹೊಂದಿ ಮಾಲೀಕರಾಗಿರುತ್ತಾರೆ.

3. 1ನೇ ವಾದಿಯು ಮುಂದುವರೆದು ಹೇಳುವುದೇನೆಂದರೆ, ವಾದಿಗಳು ಲೇಟ್ ನಂಜುಂಡಪ್ಪರವರ ವಾರಸುದಾರರಾಗಿದ್ದು, ದಾವಾ ಸ್ವತ್ತುವಿನ ಸ್ವಾಧೀನವನ್ನು ಇಲ್ಲಿಯವರೆಗೂ ಮುಂದುವರೆಸಿಕೊಂಡು ಬಂದಿರುತ್ತಾರೆ. ಹೀಗಿರುವಾಗ, ಪ್ರತಿವಾದಿಗಳೂ ವಾದಿಗಳಿಗೆ ತೊಂದರೆ ಕೊಡಬೇಕೆಂಬ ದುರುದ್ದೇಶದಿಂದ ದಾವಾ

ಷೆಡ್ಯೂಲ್ ಸ್ವತ್ತುವಿಗೆ ಅತಿಕ್ರಮ ಪ್ರವೇಶ ಮಾಡಿ – ಪ್ರತಿವಾದಿಗಳು ವಾದಿಗಳನ್ನು ದಾವಾ ಸ್ವತ್ತು ತಮ್ಮದೆಂದು ವಾದಿಗಳ ಸ್ವಾಧೀನಕ್ಕೆ ಅಡೆತಡೆ ಉಂಟು ಮಾಡಿ ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿರುತ್ತಾರೆ. ಪ್ರತಿವಾದಿಗಳು ತುಂಬಾ ಬಲಾಢ್ಯರಾಗಿದ್ದು, ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ಮುಂದುವರೆದವರಾಗಿರುತ್ತಾರೆ.

4. 1 ನೇ ವಾದಿಯು ಮುಂದುವರೆದು ಹೇಳುವುದೇನೆಂದರೆ, ನಂತರದಲ್ಲಿ ಈ ಸ್ವತ್ತುವಿಗೆ ಸಂಬಂಧಿಸಿದಂತೆ ವಾದಿಗಳು ಸಂಬಂಧಪಟ್ಟ ಪೋಲೀಸ್ ಠಾಣೆಗೆ ದಿ:17/04/2021 ರಂದು ಲಿಖಿತ ದೂರನ್ನು ನೀಡಿದ್ದು, ಪೊಲೀಸರು ಇದು ಸಿವಿಲ್ ಸ್ವರೂಪದ್ದಾದ್ದರಿಂದ ಇದನ್ನು ನ್ಯಾಯಾಲಯದಲ್ಲಿ ಇತ್ಯರ್ಥ ಪಡಿಸಿಕೊಳ್ಳಬೇಕೆಂದು ತಿಳಿಸಿದ್ದರಿಂದ ವಾದಿಗಳು ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿರುತ್ತಾರೆ. ಪ್ರತಿವಾದಿಗಳ ಈ ಕೃತ್ಯವನ್ನು ತಡೆಯಲು ನ್ಯಾಯಾಲಯದ ಆದೇಶದಿಂದ ಮಾತ್ರ ಸಾಧ್ಯವಾಗಿರುತ್ತದೆ. ವಾದಿಗಳು ಪ್ರತಿವಾದಿಗಳನ್ನು ಈ ಕೃತ್ಯವನ್ನು ನಡೆಸಬಾರದೆಂದು ಕೇಳಿಕೊಂಡರೂ ಸಹ ಪ್ರತಿವಾದಿಯರು ವಾದಿಗಳ ಮಾತಿಗೆ ಬೆಲೆ ಕೊಡದೆ ತಮ್ಮ ಅಕ್ರಮ ಕೃತ್ಯವನ್ನು ಮುಂದುವರಿಸುವ ಹುನ್ನಾರ ನಡೆಸಲು ಪ್ರಯತ್ನಿಸಿರುತ್ತಾರೆ. ಪ್ರತಿವಾದಿಗಳು ತಮ್ಮ ಅಕ್ರಮ ಕೃತ್ಯವನ್ನು ಮುಂದುವರಿಸಿದ್ದಲ್ಲಿ ವಾದಿಗಳು ದಾವ ಸ್ವತ್ತುಗಳನ್ನು ಅನುಭವಿಸಿಕೊಂಡು ಹೋಗಲು ಸಾಧ್ಯವಾಗುವುದಿಲ್ಲ ಇದರಿಂದ ವಾದಿಗಳಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ. ಆದ್ದರಿಂದ ವಾದಿಗಳು ಒಂದು

ಶಾಶ್ವತ ನಿರ್ಬಂಧಕಾಜ್ಞೆಯ ಆದೇಶವನ್ನು ಕೋರಿ ಈ ದಾವೆಯನ್ನು ಈ ಘನನ್ಯಾಯಾಲಯದಲ್ಲಿ ಹೂಡಿರುತ್ತಾರೆ.

5. ನಮ್ಮ ಅರ್ಜಿಯನ್ನು ಪುರಸ್ಕರಿಸಿದರೆ ಪ್ರತಿವಾದಿಗೆ ಯಾವುದೇ ರೀತಿಯ ನಷ್ಟವಾಗುವುದಿಲ್ಲ. ಒಂದು ವೇಳೆ ನಮ್ಮ ಅರ್ಜಿಯನ್ನು ತಿರಸ್ಕರಿದ್ದಲ್ಲಿ ನಮಗೆ ತುಂಬಲಾರದ ನಷ್ಟ ಮತ್ತು ಅನ್ಯಾಯ ಉಂಟಾಗುತ್ತದೆ .ನಾವು ನಮ್ಮ ವಾದ ಪತ್ರದ ಜೊತೆಯಲ್ಲಿ ನಮ್ಮ ಹಕ್ಕಿಗೆ ಸಂಬಂದ ಪಟ್ಟಂತಹ ದಾಖಲಾತಿಯನ್ನು ಹಾಜರುಪಡಿಸಿರುತ್ತೇವೆ ಹಾಗೂ ನಮಗೆ ಮೇಲ್ನೋಟಕ್ಕೆ ಸಾಭಿತು ಪಡಿಸಿಬಹುದಾಂತಹ ಕಾರಣಗಳಿದು ಸಮತೆಯ ಬಲವು ನಮ್ಮ ಪರ ಇರುತ್ತದೆ. ಆದುದರಿಂದ ಅರ್ಜಿಯಲ್ಲಿ ಕೇಳಿದಂತೆ ಆದೇಶ ಕೊಡಬೇಕೆಂದು ಪ್ರಾರ್ಥಿಸಿರುತ್ತಾರೆ.

6. ಪ್ರತಿವಾದಿಯು ತನ್ನ ಪ್ರತಿವಾದ ಪತ್ರವನ್ನು ತಕರಾರಾಗಿ ಪರಿಗಣಿಸಲು ವಿನಂತಿಸಿಕೊಂಡಿದ್ದು, ದಾವಾ ಷೆಡ್ಯೂಲ್ ಸ್ವರ್ವೇ ಸಂಃ1 ರ ಒಟ್ಟು ವಿಸ್ತೀರ್ಣ 365 ಎಕರೆ ಇದ್ದು, ಅದರಲ್ಲಿ 25 ಎಕರೆ ಜಮೀನು ಗೋಮಾಳವಾಗಿದ್ದು, ಉಳಿಕೆ 340 ಎಕರೆ ಜಮೀನಿನಲ್ಲಿ ಚಿಲಕಹಳ್ಳಿ ಗ್ರಾಮದ ಜನರು ವ್ಯವಸಾಯ ಮಾಡುತ್ತಿದ್ದಾರೆ. ಕೆಲವರಿಗೆ ಗ್ರ್ಯಾಂಟ್ (ಮಂಜೂರಾತಿ) ಆಗಿತ್ತದೆ. ಕೆಲವರಿಗೆ ಆಗಿರುವುದಿಲ್ಲ.

7. ಪ್ರತಿವಾಯು ಮುಂದುವರೆದು, ಮೇಲ್ಕಂಡ 340 ಎಕರೆ ಜಮೀನಿನಲ್ಲಿ 4

ಎಕರೆ ಪ್ರದೇಶದ ಜಮೀನಿನಲ್ಲಿ 1 ನೇ ಪ್ರತಿವಾದಿಯ ಯಜಮಾನರಾದ ಬೊಳಪ್ಪ ಉ.ಮಲ್ಲಪ್ಪ ಬಿನ್ ಲಿಂಗಪ್ಪ ರವರು ಸುಮಾರು 70 ವರ್ಷ ಗಳಿಂದಲೂ ಸಹ ವ್ಯವಸಾಯ ಮಾಡುತ್ತಿದ್ದರು. ಸದರಿ ಮಲ್ಲಪ್ಪ ರವರು ತಾವು ಅಕ್ರಮವಾಗಿ ವ್ಯವಸಾಯ ಮಾಡುತ್ತಿದ್ದ ಮೇಲ್ಕಂಡ 4 ಎಕರೆ ಜಮೀನಿನಲ್ಲಿ ಸಕ್ರಮಗೊಳಿಸಿಕೊಡಲು ಕೋರಿ ತಹಸೀಲ್ದಾರ್ ರವರಿಗೆ ದಿಃ25.07.1991 ರಂದು ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಜಮೀನಿನ ಆರ್ ಟಿ ಸಿ ಯಲ್ಲಿ ಅನುಭವ ಕಾಲಂನಲ್ಲಿ ಒಂದನೇ ಪ್ರತಿವಾದಿಯ ಯಜಮಾನರ ಹೆಸರು ನಮೂದಾಗಿರುತ್ತದೆ. ಒಂದನೇ ಪ್ರತಿವಾದಿಯ ಯಜಮಾನರು ಸದರಿ 4 ಎಕರೆ ಜಮೀನನ್ನು ತಾವು ಬದುಕುವವರೆಗೂ ಸಹ ಸ್ವಾಧೀನ ಹೊಂದಿ ವ್ಯವಸಾಯ ಮಾಡುತ್ತಾ ಅನುಭವಿಸುತ್ತಾ ಬಂದಿದ್ದರು. ಸದರಿ ಒಂದನೇ ಪ್ರತಿವಾದಿ ಯಜಮಾನರು ಸ್ವಾಧೀನ ಹೊಂದಿದ್ದ 4 ಎಕರೆ ಜಮೀನಿಗೆ ಚೆಕ್ಕುಬಂದಿ ಈ ರೀತಿ ಇರುತ್ತದೆ. ಪೂರ್ವಕ್ಕೆ – ಜವರಯ್ಯನವರ ಮಗ ಚಂದ್ರಯ್ಯನ ಜಮೀನು, ಪಶ್ಚಿಮಕ್ಕೆ– ರಾಜಣ್ಣರವರ ಜಮೀನು, ಉತ್ತರಕ್ಕೆ– ಓಣಿ ಮತ್ತು ದಕ್ಷಿಣಕ್ಕೆ– ಶಿವಪ್ಪ, ರಾಜಪ್ಪ ಮತ್ತು ಬಸವರಾಜಪ್ಪ ರವರ ಜಮೀನು ಇರುತ್ತದೆ.

8. 1 ನೇ ಪ್ರತಿವಾದಿ ಯಜಮಾನರು ದಿನಾಂಕಃ 16.06.2020 ರಂದು ಮರಣ ಹೊಂದಿರುತ್ತಾರೆ. ಅವರ ಮರಣದ ನಂತರ ಪ್ರತಿವಾದಿಗಳು ಸ್ವಾಧೀನ ಹೊಂದಿ ಅನುಭವಿಸುತ್ತಿರುತ್ತಾರೆ. ಪ್ರತಿವಾದಿಗಳ ಸ್ವಾಧೀನಾನುಭವದಲ್ಲಿರುವ ಮೇಲ್ಕಂಡ

ಚೆಕ್ಕುಬಂದಿಯಲ್ಲಿರುವ ಜಮೀನಿನ ಮೇಲೆ ವಾದಿಗಳಿಗೆ ಯಾವುದೇ ಹಕ್ಕು, ಕಬ್ಜೆ ಅಥವಾ ಸ್ವಾಧೀನ ಇರುವುದಿಲ್ಲ. ಸದರಿ ಜಮೀನಿನಲ್ಲಿ ವಾದಿಗಳಾಗಲಿ ಅಥವಾ ನಂಜುಂಡಪ್ಪರವರಾಗಲಿ ಯಾವಾಗಲೂ ಸ್ವಾಧೀನದಲ್ಲಿ ಇರಲಿಲ್ಲ. ಸದರಿ 4 ಎಕರೆ ಜಮೀನು ದಾವಾ ಷೆಡ್ಯೂಲ್ ಚೆಕ್ಕುಬಂದಿಯಲ್ಲಿ ಬರುತ್ತದೆ. ದಾವಾ ಷೆಡ್ಯೂಲ್ ಸ್ವತ್ತಿನ ಚೆಕ್ಕುಬಂದಿ ಮೇಲ್ಕಂಡಂತೆ ಇದ್ದು, ವಾದಿಗಳು ವಾಸ್ತವಾಂಶವನ್ನು ಮರೆಮಾಚಿ ಸುಳ್ಳು ಅಂಶಗಳನ್ನು ಸೃಷ್ಠಿಸಿಕೊಂಡಿರುತ್ತಾರೆ. ಪ್ರತಿವಾದಿಗಳು ಸ್ವಾಧೀನದಲ್ಲಿರುವ 4 ಎಕರೆ ಜಮೀನಿನ ಚೆಕ್ಕುಬಂದಿಯನ್ನು ತೋರಿಸಿ ಸುಳ್ಳು ದಾವೇಯನ್ನು ಸಲ್ಲಿಸಿರುತ್ತಾರೆ. ದಾವಾ ಚೆಕ್ಕುಬಂದಿಯಲ್ಲಿ ಬರುವ ಜಮೀನು ಪ್ರತಿವಾದಿಗಳ ಸ್ವಾಧೀನಾನುಭವದಲ್ಲಿರುವ ಜಮೀನಾಗಿರುತ್ತದೆ. ದಾವಾ ಚೆಕ್ಕುಬಂದಿಯಲ್ಲಿರುವ ಜಮೀನಿನ ಮೇಲೆ ವಾದಿಗಳಿಗೆ ಮತ್ತು ಅವರ ಪೂರ್ವಿಕರಿಗೆ ಯಾವುದೇ ಹಕ್ಕು ಕಬ್ಜೆ ಇರುವುದಿಲ್ಲ ಮತ್ತು ಯಾವಾಗಲೂ ಸ್ವಾಧೀನದಲ್ಲಿ ಇರಲಿಲ್ಲ, ತಮ್ಮ ಅನುಕೂಲಕ್ಕೆ ತಕ್ಕ ವ್ಯಾಜ್ಯ ಕಾರಣವನ್ನು ಸೃಷ್ಟಿಸಿಕೊಂಡಿರುತ್ತಾರೆ. ಆದ ಕಾರಣ ಅರ್ಜಿಯನ್ನು ವಜಾಗೊಳಿಸಲು ವಿನಂತಿಸಲಾಗಿದೆ.

9. ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು, ದಾಖಲೆಗಳನ್ನು ಪರಿಶೀಲಿಸಲಾಯಿತು ತನ್ನ ಪರಿಗಣಗೆಗೆ ಈ ಕೆಳಗಿನ ಅಂಶಗಳು ಉದ್ಬವಿಸುತ್ತವೆ.

1. **ವಾದಿ/ಅರ್ಜಿದಾರ ತಾನು ಮೇಲ್ನೋಟಕ್ಕೆ**

**ಉತ್ತಮವಾಗ ಕೇಸನ್ನು ಹೊಂದಿರುವುದಾಗಿ ತೋರಿಸಿಕೊಡುವರೇ?**

2. **ವಾದಿ/ಅರ್ಜಿದಾರ ಅನುಕೂಲ ಸಂತೂಲನೆ ತನ್ನ ಪರವಾಗಿ ಇದೆ ಎಂದು ತೋರಿಸಿ ಕೊಡುವರೇ?**

3. **ವಾದಿ/ಅರ್ಜಿದಾರ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡದೆ ಇದ್ದರೆ ತನಗೆ ಸರಿ ಪಡಿಸಲಾಗದ ನಷ್ಟ ಮತ್ತು ತೊಂದರೆ ಆಗುತ್ತದೆ ಎಂದು ತೋರಿಸಿ ಕೊಡುವರೇ?**

**4.** ಯಾವ ಆದೇಶ**?**

10. ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದ್ದೇನೆ.

ಅಂಶ ಸಂಖ್ಯೆ: 1– ನಕರಾತ್ಮಕವಾಗಿ
ಅಂಶ ಸಂಖ್ಯೆ: 2– ನಕರಾತ್ಮಕವಾಗಿ
ಅಂಶ ಸಂಖ್ಯೆ: 3– ನಕರಾತ್ಮಕವಾಗಿ
ಅಂಶ ಸಂಖ್ಯೆ: 4– ಅಂತಿಮ ಆದೇಶದಂತೆ ಈ ಕಾರಣಗಳಿಗಾಗಿ.

## ಕಾರಣಗಳು

11. **ಅಂಶ 1 ರಿಂದ 3:** ಈ ಮೂರು ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಅವುಗಳ ಒಟ್ಟಾಗಿ ಚರ್ಚೆಗಾಗಿ ತೆಗೆದುಕೊಳ್ಳಲಾಗಿದೆ.

12. ವಾದಿ ಈ ಅರ್ಜಿಯನ್ನು ಸಲ್ಲಿಸಿ ದಾವೆಯ ಅಂತಿಮ ವಿಲೆಯವರೆಗೆ ಪ್ರತಿವಾದಿಗಳು ಅತಿಕ್ರಮ ಪ್ರವೇಶ ಮಾಡದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಕೋರಿರುತ್ತಾರೆ. ವಾದಿ ಹಾಗೂ ಪ್ರತಿವಾದಿಗಳ ವಾದಾಪತ್ರ ಹಾಗೂ ಪ್ರತಿವಾದ ಪತ್ರಗಳನ್ನು ಗಮನಿಸಿದಾಗ ದಾವ ಸ್ವತ್ತು ಹಾಗೂ ಪ್ರತಿವಾದಿ ಸ್ವತ್ತುಗಳ ನಡುವೆ ಗಡಿರೇಖೆಯ ಸಮಸ್ಯೆ ಇರುವಂತೆ ಮೇಲ್ನೋಟಕ್ಕೆ ಕಂಡುಬರುತ್ತದೆ, ಅಲ್ಲದೇ ವಾದಿ ಹಾಜರು ಪಡಿಸಿರುವ ಹಕ್ಕು ಪತ್ರದಲಿ ಸರ್ವೇ ನಂಬರ್ ಕಾಣಸುತ್ತಿಲ್ಲ. ಆದಾಕರಣ ಈ ಪ್ರಕರಣದ ಸತ್ಯಾಸತ್ಯತೆಯನ್ನು ತಿಳಿಯಲು ದಾವೆಯಲ್ಲಿ ಸಂಪೂರ್ಣ ವಿಚಾರಣೆಯ ಅಗತ್ಯವಿರುತ್ತದೆ. ಆದ ಕಾರಣ ಮೇಲ್ನೋಟಕ್ಕೆ ರುಜುವಾತು ಪಡಿಸುವ ಅಂಶಗಳನ್ನು ವಾದಿ ಪ್ರಸ್ತುತ ಪಡಿಸದೇ ಇರುವುದರಿಂದ ಅನುಕೂಲತೆಯ ಸಂತುಲನೆ ಪ್ರತಿವಾದಿಯ ಪರವಿದ್ದು ಒಂದು ವೇಳೆ ವಾದಿ ಕೇಳಿದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ನೀಡಿದ್ದಲ್ಲಿ ಪ್ರತಿವಾದಿಗೆ ಹೆಚ್ಚು ಅನಾನುಕೂಲವಾಗುತ್ತದೆ. ಆದಕಾರಣ ಮೇಲೆ ಹೇಳಿದ ಎಲ್ಲಾ ಅಂಶಗಳಿಗಾಗಿ **ಅಂಶ 1 ರಿಂದ 3 ನ್ನು ನಕರಾತ್ಮಕವಾಗಿ ಉತ್ತರಿಸಲಾಗಿದೆ.**

**13**. ಪ್ರಸ್ತುತ ಅರ್ಜಿಯಲ್ಲಿ ಪರಿಗಣಿಸಿರುವ ಅಂಶಗಳು ಪ್ರಸ್ತುತ ಅರ್ಜಿಯನ್ನು ವಿಲೇವಾರಿ ಮಾಡುವ ಸಲುವಾಗಿ ವ್ಯಕ್ತಪಡಿಸಿದ್ದು, ಸದರಿ ಅಂಶಗಳನ್ನು ಪ್ರಸ್ತುತ ದಾವೆಯ ಅರ್ಹತೆಗಳ ಮೇಲೆ ಇತ್ಯರ್ಥಪಡಿಸಿರುವುದಾಗಿರುವುದಿಲ್ಲ.

14. **ಅಂಶ –4–** ಅಂಶ 1 ರಿಂದ 3 ಕ್ಕೆ ನೀಡಿದ ಕಾರಣ ಮತ್ತು ನಕರಾತ್ಮಕ ಉತ್ತರಗಳಿಗನುಸಾರವಾಗಿ ಈ ಕೆಳಗಿನಂತೆ ಆದೇಶಿಸಿದ್ದೇನೆಃ

**ಆದೇಶಃ**

**ವಾದಿ/ಅರ್ಜಿದಾರ ಸಿಪಿಸಿ ಕ್ರಮಾದೇಶ–39 ನಿಯಮ 1 ಮತ್ತು 2 ರನ್ವಯ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಃ1 ನ್ನು ತಿರಸ್ಕರಿಸಲಾಗಿದೆ.**

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರ ಉಕ್ತಲೇಖನ ಕೊಟ್ಟು ಅವರಿಂದ ಬೆರಳಚ್ಚು ಮಾಡಿಸಿದ ನಂತರ ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ದಿಃ **23 ನೇ ಜುಲೈ -2025** ರಂದು ಆದೇಶವನ್ನು ಘೋಷಿಸಲಾಯಿತು.)

**(ಶ್ರೀಮತಿ.ಸರಿತ ಕುಮಾರಿ.ಎ.ಎಂ.)**
**ಒಂದನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳು,**
**ನಂಜನಗೂಡು.**